ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬಹುದಾಗಿದ್ದು ಅಲ್ಲಿ ಒಂದು ಸಮುದಾಯ ಆರೋಗ್ಯ ಕೇಂದ್ರ ಈಗಾಗಲೇ ಕಾರ್ಯನಿರ್ವಹಿಸುತ್ತಿದೆ. ಹಾಗೂ ಕೊರಟಗೆರೆ ತಾಲ್ಲೂಕು ಗ್ರಾಮೀಣ ಜನಸಂಖ್ಯೆ 1,47,031 ಇದ್ದು ಇಲ್ಲಿಯೂ ಸಹ ಒಂದು ಸಮುದಾಯ ಆರೋಗ್ಯ ಕೇಂದ್ರವನ್ನು ಮಾರ್ಗಸೂಚಿಗಳ ಪ್ರಕಾರ ಮಂಜೂರು ಮಾಡುವ ಅವಕಾಶವಿದ್ದು ಈಗಾಗಲೇ ಒಂದು ಸಮುದಾಯ ಆರೋಗ್ಯ ಕೇಂದ್ರ ಕಾರ್ಯನಿರ್ವಹಿಸುತ್ತಿದೆ. ಆದ್ದರಿಂದ ಹೆಚ್ಚಿನ ಸಮುದಾಯ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಲು ಅವಕಾಶವಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು

940 (1468) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಹಾಗಿದ್ದಲ್ಲಿ, ಪ್ರತಿ ವಸತಿ ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳು ವಿಧ್ಯಾಭ್ಯಾಸ ಮಾಡುತ್ತಿದ್ದಾರೆ;

ಇ) ಇನ್ನು ಹೆಚ್ಚಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾರಂಭಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಡಾ॥ ಮುಮ್ತಾಜ್ ಆಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಅಲ್ಪಸಂಖ್ಯಾತರ ಇಲಾಖಾವಾತಿಯಿಂದ 51 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಮಂಜೂರಾಗಿರುತ್ತದೆ.

ಜಿಲ್ಲಾವಾರು ವಿವರವನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಮಾಹಿತಿಯನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ಇ) ವಸತಿ ಶಾಲೆಗಳ ಬೇಡಿಕೆ ಮತ್ತು ಅಗತ್ಯತೆ ಹಾಗೂ ಅನುದಾನದ ಲಭ್ಯತೆ ಆಧಾರದ ಮೇಲೆ ಹೊಸ ವಸತಿ ಶಾಲೆಗಳ ಪ್ರಾರಂಭದ ಬಗ್ಗೆ ಕ್ರಮವಹಿಸಲಾಗುವುದು.

ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) ವಿಧಾನ ಸಭೆಯ ಸದಸ್ಯರ ರವರ ಚುಕ್ಕೆ ಗುರುತಿನ ಪ್ರಶ್ನೆಯ ಸಂಖ್ಯೆ: 1468 ಕ್ಕೆ ಅನುಬಂಧ-1

ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ವಿವರ

ಕ್ರ ಸಂ.	ಜಿಲ್ಲೆ	ತಾಲ್ಲೂಕು	ಸ್ಥಳ
1.	ಬಾಗಲಕೋಟೆ	ಬಾಗಲಕೋಟೆ	ನವನಗರ
2.	ಬೆಳಗಾಂ	ಬೈಲುಹೊಂಗಲ	ಹುಲೀಕಟ್ಟೆ (ಶ್ರೀನಗರ)
3.	ಬಳ್ಳಾರಿ	ಬಳ್ಳಾರಿ	ಕೊಲಗಲ್ಲು
4.		ಕೂಡ್ಲಿಗಿ	ತಾಯಕನಹಳ್ಳಿ
5.	ಬೀದರ್	ಬೀದರ್	ಬೊಮ್ಮಳಗಿ
6.	ಬಿಜಾಪುರ	ಬಿಜಾಪುರ	ಬಿಜಾಪುರ ಟೌನ್
7.		ಇಂಡಿ	ಚಡಚಣ
8.	ಚಾಮರಾಜನಗರ	ಗುಂಡ್ಲುಪೇಟೆ	ಗುಂಡ್ಲುಪೇಟೆ ಟೌನ್
9.	ಚಿಕ್ಕಮಗಳೂರು	ಚಿಕ್ಕಮಗಳೂರು	ಚಿಕ್ಕಮಗಳೂರು ಟೌನ್
10.		ಕಡೂರು	ಕಡೂರು ಟೌನ್
11.	ಚಿಕ್ಕಬಳ್ಳಾಪುರ	ಚಿಕ್ಕಬಳ್ಳಾಪುರ	ಪೆರೇಸಂದ್ರ
12.		ಚಿಂತಾಮಣಿ	ಕೈವಾರ (ಮಸ್ತೇನಹಳ್ಳಿ)
13.	ಚಿತ್ರದುರ್ಗಾ	ಚಿತ್ರದುರ್ಗಾ	ಚಿತ್ರದುರ್ಗಾ ಟೌನ್
14.		ಹಿರಿಯೂರು	ಹಿರಿಯೂರು ಟೌನ್

15.	ದಕ್ಷಿಣ ಕನ್ನಡ	ಮಂಗಳೂರು	ಉಳ್ಳಾಲ (ದೇರಳಕಟ್ಟೆ)
16.	ದಾವಣಗೆರೆ	ಚೆನ್ನಗಿರಿ	ಕೆರೆಬಿಳಚಿ
17.		ಹರಿಹರ	ಹಳೇ ಹರ್ಲಾಪುರ
18.		ದಾವಣಗೆರೆ	ದಾವಣಗೆರೆ ಟೌನ್
19.	ಧಾರವಾಡ	ಹುಬ್ಬಳ್ಳಿ	ಬೈರಿ ದೇವರ ಕೊಪ್ಪ
20.		ಹುಬ್ಬಳ್ಳಿ	ಸಿದ್ಧರೂಡ ಮಟ
21.	ಗದಗ	ಗದಗ	ಗದಗ ಟೌನ್
22.	ಗುಲ್ಬರ್ಗಾ	ಜೇವರ್ಗಿ	ಜೇವರ್ಗಿ ಟೌನ್
23.		ಚಿತ್ತಾಪುರ	ದಂಡೋತಿ ಗ್ರಾಮ
24.	ಹಾಸನ	ಹಾಸನ	ಹಾಲುವಾಗಿಲು
25.		ಹೊಳೆನರಸೀಪುರ	ಹೊಳೆನರಸೀಪುರ ಟೌನ್
26.		ಅರಕಲಗೂಡು	ಅರಕಲಗೂಡು ಟೌನ್
27.	ಹಾವೇರಿ	ಹಾವೇರಿ	ಹಾವೇರಿ ಟೌನ್
28.	ಕೊಡಗು	ವೀರಾಜಪೇಟೆ	ವೀರಾಜಪೇಟೆ ಟೌನ್
29.		ಸೋಮವಾರಪೇಟೆ	ಕೊಡ್ಲಿಪೇಟೆ
30.	ಕೋಲಾರ	ಕೋಲಾರ	ಕೋಲಾರ ಟೌನ್
31		ಮುಳಬಾಗಿಲು	ಮುಳಬಾಗಿಲು ಟೌನ್
32.	ಕೊಪ್ಪಳ	ಕೊಪ್ಪಳ	ಕೊಪ್ಪಳ ಟೌನ್
33.		ಯಲಬುರ್ಗಾ	ಕುಕನೂರು
34.		ಯಲಬುರ್ಗಾ	ತಳಕಲ್
35.		ಗಂಗಾವತಿ	ಗಂಗಾವತಿ ಟೌನ್
36.	ಮಂಡ್ಯ	ನಾಗಮಂಗಲ	ನಾಗಮಂಗಲ ಟೌನ್
37.	ಮೈಸೂರು	ಮೈಸೂರು	ದೊಡ್ಡಹುಂಡಿ

38.		ಹಲಗನಹಳ್ಳಿ	ಪಿರಿಯಾಪಟ್ಟಣ
39.	ರಾಯಚೂರು	ರಾಯಚೂರು	ರಾಯಚೂರು ಟೌನ್
40.		ಮಾನ್ವಿ	ಮಾನ್ವಿ ಟೌನ್
41.		ರಾಯಚೂರು	ಗಿಲ್ಲಸಗೂರು
42.	ರಾಮನಗರ	ಚನ್ನಪಟ್ಟಣ	ಚನ್ನಪಟ್ಟಣ ಟೌನ್
43.		ಮಾಗಡಿ	ಮಾಗಡಿ ಟೌನ್
44.	ಶಿವಮೊಗ್ಗ	ಶಿವಮೊಗ್ಗ	ಮೆಲಿನ ಹನಸವಾಡಿ
45.		ಶಿಕಾರಿಪುರ	ಶೀರಾಳಕೊಪ್ಪ
46.	ತುಮಕೂರು	ಶಿರಾ	ಶಿರಾ ಟೌನ್
47.		ಕುಣಿಗಲ್	ಕುಣಿಗಲ್ ಟೌನ್
48.	ಉತ್ತರ ಕನ್ನಡ	ದಾಂಡೇಲಿ	ಅಂಬೆವಾಡಿ
	ಪದವಿ ಪೂರ್ವ ಮೊರಾರ್ಜಿದೇಸಾಯಿ ವಸತಿ ಕಾಲೇಜುಗಳು		
49.	ರಾಮನಗರ	ರಾಮನಗರ	ರಾಮನಗರ
50.	ಬೀದರ್	ಬೀದರ್	ಬೀದರ್
51.	ದಕ್ಷಿಣ ಕನ್ನಡ	ಉಳ್ಳಾಲ	ದೇರಳಕಟ್ಟೆ

ಅಲ್ಪಸಂಖ್ಯಾತರ ಶಾದಿಮಹಲ್‌ಗಳು

941 (1469) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ಅಲ್ಪಸಂಖ್ಯಾತರ ಶಾದಿಮಹಲ್‌ಗಳ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಬಂದಿರುವ ಪ್ರಸ್ತಾವನೆಗಳು ಎಷ್ಟು? ಎಷ್ಟು ಪ್ರಸ್ತಾವನೆಗಳನ್ನು ಅನುಮೋದಿಸಲಾಗಿದೆ;

ಆ) ಕಳೆದ 3 ವರ್ಷಗಳಲ್ಲಿ ಪ್ರಸ್ತಾವನೆಗಳಿಗೆ ಮಂಜೂರಾದ ಶಾದಿಮಹಲ್‌ಗಳು ಎಷ್ಟು;